# **ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ , ಮೈಸೂರು.**

## **SC.261/2021**

**P.W.-02**
**C.W.-03**

| | | |
|---|---|---|
| ಹೆಸರು | : | Yashwanth |
| ತಂದೆಯ ಹೆಸರು | : | Somappa |
| ವಯಸ್ಸು | : | 13 Years |
| ಉದ್ಯೋಗ | : | $9^{th}$ Class Student |
| ವಾಸಸ್ಥಳ | : | Bannahalli Hundi, T.Narasipura |

**ಸಾಕ್ಷಿ ಅಪ್ರಾಪ್ತ ವಯಸ್ಕನಾಗಿರುವುದರಿಂದ ನ್ಯಾಯಾಲಯ ಈ ಕೆಳಕಂಡ ಪ್ರಶ್ನೆಗಳನ್ನು ಸಾಕ್ಷಿಗೆ ಕೇಳಿ ಉತ್ತರ ಪಡೆದಿರುತ್ತದೆ.**

1. ನೀನು ಎಲ್ಲಿಗೆ ಬಂದ್ದಿದೀಯ?

ಉತ್ತರಃ ಮೈಸೂರು.

2. ಇದು ಯಾವ ಜಾಗ?

ಉತ್ತರಃ ನ್ಯಾಯಾಲಯ.

3. ನಾನು ಯಾರು?

ಉತ್ತರಃ ಜಡ್ಜ್

4. ಎದುರು ಇರುವವರು ಯಾರು?

ಉತ್ತರಃ ಲಾಯರ್

**(ಸಾಕ್ಷಿ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯವನ್ನು ಹೊಂದಿರುತ್ತಾನೆ ಎನ್ನುವುದನ್ನು ಮನಗೊಂಡು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ವಿಚಾರಣೆ ಮಾಡಲು ಅನುಮತಿ ನೀಡಲಾಯಿತು.)**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಚಾಸಾ-1 ನನ್ನ ತಂದೆ. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಚಿಕ್ಕಪ್ಪ. ಚಾಸಾ-2 ಮೋಹನ ನನ್ನ ಚಿಕ್ಕಪ್ಪನ ಮಗ ಅಂದರೆ ನನ್ನ ತಮ್ಮ. ಮೃತ ಲಕ್ಷ್ಮಮ್ಮ ನನ್ನ ಅಜ್ಜಿ. ನಾವು ಮತ್ತು ನಮ್ಮ

ಚಿಕ್ಕಪ್ಪನ ಕುಟುಂಬ ಬೇರೆ ಬೇರೆ ವಾಸ ಮಾಡುತ್ತಿದ್ದೇವೆ. ನಮ್ಮಿಬ್ಬರ ಮನೆಗಳು ಅಕ್ಕಪಕ್ಕದಲ್ಲಿವೆ. ನನ್ನ ಅಜ್ಜಿ ಈಗ ಮೃತ ಪಟ್ಟಿರುತ್ತಾರೆ.

2. ದಿಃ29.07.2021 ರಂದು ಸಂಜೆ 6.00 ಗಂಟೆಯ ಸಮಯದಲ್ಲಿ ನಮ್ಮ ಮನೆಯ ಪಕ್ಕದಲ್ಲಿರುವ ನಲ್ಲಿಯ ಹತ್ತಿರ ನನ್ನ ತಂದೆಯ ಬೈಕನ್ನು ತೊಳೆಯುತ್ತಿದ್ದೆ. ಮಾತು ಮಾತಿಗೂ ನಮ್ಮ ಚಿಕ್ಕಪ್ಪ ನಮ್ಮ ತಂದೆ ತಾಯಿಯೊಂದಿಗೆ ಜಗಳವಾಡುತ್ತಿದ್ದರು. ನಾನು ಬೈಕ್ ತೊಳೆಯುತ್ತಿದ್ದಾಗ, ನನ್ನ ಬೈಕನ್ನು ತೊಳೆಯದೇ, ನಿಮ್ಮ ಬೈಕನ್ನು ಮಾತ್ರ ತೊಳೆಯುತ್ತಿದ್ದೀಯಾ ಎಂದು ದೊಣ್ಣೆ ತೆಗೆದುಕೊಂಡು ಹೊಡೆಯಲು ಬಂದರು, ಆಗ ನಮ್ಮ ಅಜ್ಜಿ ಅಡ್ಡ ಬಂದರು, ನನಗೆ ಬೀಳಬೇಕಾದ ಏಟು ಮಿಸ್ಸು ಆಗಿ ನನ್ನ ಅಜ್ಜಿಯ ತಲೆಗೆ ಬಿತ್ತು. ಅಜ್ಜಿ ಕೆಳಕ್ಕೆ ಬಿದ್ದರು. ಆಗ ನಾನು ಮತ್ತು ನನ್ನ ತಮ್ಮ ಅಳಲು ಆರಂಭಿಸಿದೆವು. ಆಗ ಜನ ಸೇರಿದರು. ನನ್ನ ತಂದೆಗೆ ಕರೆ ಮಾಡಿದರು. ಆಗ ಅವರು 6.30 ರ ಸಮಯಕ್ಕೆ ಬಂದರು. ಅಷ್ಟರಲ್ಲಿ ನನ್ನ ಅಜ್ಜಿ ಮೃತ ಪಟ್ಟಿದ್ದರು. ನನ್ನ ತಂದೆಗೆ ನಾನು ಘಟನೆಯನ್ನು ವಿವರಿಸಿದೆ. ನನ್ನ ತಂದೆ ನನ್ನ ಅಜ್ಜಿಯ ಶವವನ್ನು ಶವ ಪರೀಕ್ಷೆಗಾಗಿ ಟಿ.ನರಸೀಪುರ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು.

3. ಈಗ ನೋಡುತ್ತಿರುವ ದೊಣ್ಣೆಯಿಂದಲೇ ಆರೋಪಿ ನನಗೆ ಹೊಡೆಯಲು ಬಂದಿದ್ದು. ಅದನ್ನು ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

4. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ.

5. ನಂತರ ನನ್ನನ್ನು ಟಿ.ನರಸೀಪುರ ಕೋರ್ಟ್‌ಗೆ ಕರೆದುಕೊಂಡು ಹೋಗಿದ್ದರು. ಕೋರ್ಟ್‌ನಲ್ಲಿ ನಾನು ಜಡ್ಜ್ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

6. ತೆರೆದ ನ್ಯಾಯಾಲಯದಲ್ಲಿ ಸೀಲ್ಡ್ ಕವರನ್ನು ತೆರೆದು ಅದರಲ್ಲಿದ ಕಲಂ 164 ಸಿಆರ್.ಪಿ.ಸಿ ಅಡಿಯಲ್ಲಿ ದಾಖಲಾಗಿದ್ದ ಸಾಕ್ಷಿಯ ಹೇಳಿಕೆಯನ್ನು ತೆರೆಯಲಾಯಿತು. (ಸದರಿ ಸೀಲ್ಡ್ ಕವರಿನಲ್ಲಿ ಸಾಕ್ಷಿ ಮೋಹನ್ ಎಂ.ರವರ ಹೇಳಿಕೆಯು ಸಹ ಇರುತ್ತದೆ.) ಸದರಿ ಹೇಳಿಕೆಯನ್ನು ನೋಡಿ ಸಾಕ್ಷಿ ಅದರ ಮೇಲಿರುವ ಸಹಿಯನ್ನು ಗುರುತಿಸಿರುತ್ತಾನೆ. ಆ ಹೇಳಿಕೆಯನ್ನು ನಿಪಿ-8 ಎಂತಲೂ ಮತ್ತು ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-8(ಎ) ಎಂದು ಗುರುತು ಪಡಿಸಿಕೊಳ್ಳಲಾಯಿತು.

**SC.No.261/2021**
**P.W.-02**
**C.W.-03**

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)**

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ –**

7. ನಾನು ಬೈಕ್ ತೊಳೆಯುತ್ತಿದ್ದಾಗ, ಆರೋಪಿ ಬಂದು, ನನ್ನ ಬೈಕನ್ನು ತೊಳೆಯದೇ, ನಿನ್ನ ತಂದೆಯ ಬೈಕನ್ನು ತೊಳೆಯುತ್ತಿದ್ದೀಯಾ ಎಂದು ಹೊಡೆಯಲು ಬಂದಾಗ, ನಮ್ಮ ಅಜ್ಜಿ ಲಕ್ಷ್ಮಮ್ಮ ಕೈಯಲ್ಲಿ ಒಂದು ದೊಣ್ಣೆಯನ್ನು ಹಿಡಿದುಕೊಂಡು ಬಂದು, ಯಾಕೆ ಯಶವಂತನಿಗೆ ಹೊಡೆಯಲು ಹೋಗುತ್ತಿದ್ದೀಯಾ ಎಂದು ಕೇಳಿದರು ಎನ್ನುವುದು ಸರಿ. ಆಗ ಆರೋಪಿ ನಮ್ಮ ಅಜ್ಜಿಯ ಕೈಯಲ್ಲಿದ್ದ ದೊಣ್ಣೆಯನ್ನು ಕಿತ್ತು ಕೊಂಡು, ನನಗೆ ಸರಿಯಾದ ಸಮಯಕ್ಕೆ ಊಟ ಕೊಡಲ್ಲ, ಚಿಕಿತ್ಸೆಗೆ ಹಣ ಕೊಡಲ್ಲ, ನಿಂಗೆ ನನ್ನ ಕಂಡ್ರೆ ಆಗಲ್ಲ, ನಿನ್ನ ಹಿರಿಮಗ, ಅವನ ಮಕ್ಕಳು ಎಂದರೆ ತುಂಬಾ ಇಷ್ಟ, ನಿನಗೆ ಒಂದು ಗತಿ ಕಾಣಿಸುತ್ತೇನೆ ಎಂದು ಹೇಳಿ ದೊಣ್ಣೆಯಿಂದ ನಮ್ಮ ಅಜ್ಜಿಯ ತಲೆಗೆ, ಹಣೆಗೆ, ಹೊಡೆದರು ಎನ್ನುವುದು ಸರಿ.

**(ಶ್ರೀ. ಹೆಚ್.ಎಸ್.ಎಂ. ವಕೀಲರು ಹಾಜರಾಗಿ, ಆರೋಪಿಯ ಕಡೆಯವರು ಬಂದು ಕಡತವನ್ನು ಮತ್ತು Memo of Retirement ನ್ನು ನನ್ನಿಂದ ಪಡೆದುಕೊಂಡು ಹೋಗಿರುತ್ತಾರೆ ಎಂದಿರುತ್ತಾರೆ. ಆರೋಪಿಯನ್ನು ಪಾಟೀಸವಾಲುಗೊಳಿಸಲು ಕೇಳಿದಾಗ, ನನಗೆ ಅಷ್ಟೊಂದು Knowledge ಇರುವುದಿಲ್ಲ, ಆದ್ದರಿಂದ, ಆಗುವುದಿಲ್ಲ ಎಂದಿರುತ್ತಾನೆ. ಹೀಗಾಗಿ ಪಾಟೀಸವಾಲನ್ನು "ಇಲ್ಲ." ಎಂದು ತೆಗೆದುಕೊಳ್ಳಲಾಯಿತು.)**

**ಆರೋಪಿಯನ್ನು, ಸರ್ಕಾರಿ ವಕೀಲರನ್ನು ನಿನಗೆ ಕೊಡಲಾಗುವುದು ಎಂದು ಹೇಳಿದಾಗ, ಈ ಬಗ್ಗೆ ಮುಂದಿನ ದಿನಾಂಕದಂದು ತಿಳಿಸುತ್ತೇನೆ ಎನ್ನುತ್ತಾರೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.